# 8 ಮೇ 2009 ರಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಸಾರಾಂಶ.

1. ರಾಘವನ್ ಸಮಿತಿಯು ನೀಡಿದ ಅನೇಕ ಶಿಫಾರಸ್ಸುಗಳನ್ನು ತಕ್ಷಣವೇ ಜಾರಿಗೆ ತರಬೇಕೆಂದು ಗೌರಾವಾನ್ವಿತ ಸುಪ್ರೀಂ ಕೋರ್ಟ್ ಆದೇಶ ನೀಡಿತು. ಅವು ಕೆಳಕಂಡಂತಿವೆ:
   - ಸಲಹೆಗಾರರ ನೇಮಕ, ಕಿರಿಯ ವಿದ್ಯಾರ್ಥಿಗಳು ಆಗಮಿಸಿದ ಒಂದು ಅಥವಾ ಎರಡು ವಾರಗಳ ನಂತರ ಹಿರಿಯ ವಿದ್ಯಾರ್ಥಿಗಳ ಆಗಮನ; ಜಂಟಿ ಸಂವೇದೀಕರಣ ಕಾರ್ಯಕ್ರಮಗಳು; ಪ್ರಾಂಶುಪಾಲರು/ ಸಂಸ್ಥೆಯ ಮುಖ್ಯಸ್ಥರಿಂದ 'ನೂತನ' ಮತ್ತು 'ಹಿರಿಯ' ವಿದ್ಯಾರ್ಥಿಗಳ ಜಂಟಿ ಅಭಿಶಿಕ್ಷಣ ಕಾರ್ಯಕ್ರಮ; ಸಾಂಸ್ಕೃತಿಕ, ಕ್ರೀಡಾ ಮತ್ತು ಇತರೆ ಚಟುವಟಿಕೆಗಳ ಭಾರೀ ಪ್ರಮಾಣದ ಆಯೋಜನೆ; ತಮ್ಮ ತಮ್ಮ ಹಾಸ್ಟೆಲ್ ಗಳಲ್ಲಿ ಹಾಸ್ಟೆಲ್ ನಿವಾಸಿಗಳೊಂದಿಗೆ ಅಧ್ಯಾಪಕ ವರ್ಗದವರು ಊಟ ಮಾಡುವ ಸೌಲಭ್ಯಗಳು ಮುಂತಾದ ವಿಶ್ವಾಸ ವೃದ್ಧಿಸುವ ಕ್ರಮಗಳು.
   - ಪ್ರತಿಯೊಂದು ಸಂಸ್ಥೆಯು ಒಂದು ರಾಗಿಂಗ್ ವಿರೋಧಿ ಸಮಿತಿ ಮತ್ತು ಒಂದು ರಾಗಿಂಗ್ ವಿರೋಧಿ ದಳವನ್ನು ಹೊಂದಿರಬೇಕು. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ರಾಗಿಂಗ್ ಮಾನಿಟರಿಂಗ್ ಸೆಲ್ ಇರಬೇಕು ಮತ್ತು ಇದು ತನ್ನ ಅಧೀನಕ್ಕೆ ಒಳಪಡುವ ಕಾಲೇಜುಗಳು ಮತ್ತು ಸಂಸ್ಥೆಗಳೊಂದಿಗೆ ಸಂಘಟಿತಗೊಳ್ಳುತ್ತದೆ. ರಾಜ್ಯದ ವಿಶ್ವವಿದ್ಯಾನಿಲಯದ ಕುಲಪತಿಗಳ ಮಟ್ಟದಲ್ಲಿ ಒಂದು ಮಾನಿಟರಿಂಗ್ ಸೆಲ್ ಇರಬೇಕು.
   - ಕ್ಯಾಂಪಸ್ ಹೊರಗೆ ಖಾಸಗಿ ಆಡಳಿತದಲ್ಲಿನ ವಾಣಿಜ್ಯರೂಪದ ಲಾಡ್ಜ್ ಗಳು ಅಥವಾ ಹಾಸ್ಟೆಲ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಇಂತಹ ಹಾಸ್ಟೆಲ್ ಮತ್ತು ಆಡಳಿತ ಮಂಡಳಿಯು ಸ್ಥಳೀಯ ಪೋಲಿಸ್ ಅಧಿಕಾರಿಗಳೊಂದಿಗೆ ನೋಂದಾಯಿತರಾಗಿರಬೇಕು ಮತ್ತು ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಇಂತಹ ಹಾಸ್ಟೆಲ್ ಗಳ ಪ್ರಾರಂಭಕ್ಕೆ ಅನುಮತಿ ಅಥವಾ ಅವುಗಳ ನೋಂದಣಿಯನ್ನು ಶಿಫಾರಸ್ಸು ಮಾಡಬೇಕು. ಸ್ಥಳೀಯ ಪೋಲಿಸ್, ಸ್ಥಳೀಯ ಆಡಳಿತ ಹಾಗೂ ಸಾಂಸ್ಥಿಕ ಅಧಿಕಾರಿಗಳಿಗೆ, ರಾಗಿಂಗ್ ನ ವ್ಯಾಖ್ಯಾನದ ಪರಿಧಿಯೊಳಗೆ ಬರುವ ಎಲ್ಲಾ ಘಟನೆಗಳ ಮೇಲೆ ನಿಗಾ ವಹಿಸುವುದನ್ನು ಖಡ್ಡಾಯ ಮಾಡಲೇಬೇಕು.
   - ವಾರ್ಡನ್ ಗಳು ಎಲ್ಲಾ ಸಮಯಗಳಲ್ಲೂ ಲಭ್ಯವಿರಬೇಕು ಮತ್ತು ಹೀಗಾಗಿ ಅವರು ದೂರವಾಣಿ ಮತ್ತು ಇತರ ಎಲ್ಲಾ ಸಂವಹನ ಮಾಧ್ಯಮಗಳಲ್ಲಿ ಲಭ್ಯವಿರುವುದು ಮುಖ್ಯವಾಗಿದೆ. ಹಾಗೆಯೇ, ಅಗತ್ಯವಿರುವೆಡೆಗಳಲ್ಲಿ, ಸಂಸ್ಥೆಯ ಮುಖ್ಯಸ್ಥರು, ಅಧ್ಯಾಪಕ ವರ್ಗದವರು, ರಾಗಿಂಗ್ ವಿರೋಧಿ ಸಮಿತಿಯ ಸದಸ್ಯರು, ಜಿಲ್ಲಾ ಮತ್ತು ಉಪ-ವಿಭಾಗೀಯ ಅಧಿಕಾರಿಗಳು ಮತ್ತು ರಾಜ್ಯ ಅಧಿಕಾರಿಗಳು ಮುಂತಾದ ಇತರ ಪ್ರಮುಖ ಕಾರ್ಯಕರ್ತರ ದೂರವಾಣಿ ಸಂಖ್ಯೆಗಳನ್ನು ಕೂಡ ಅಗತ್ಯವಿರುವ ಎಲ್ಲರಿಗೂ, ತುರ್ತು ಪರಿಸ್ಥಿತಿಗಳಲ್ಲಿ ಸಹಾಯ ಪಡೆಯಲು, ನೀಡಬೇಕು.

- ಪ್ರತಿಯೊಂದು ಶೈಕ್ಷಣಿಕ ವರ್ಷದ ಆರಂಭದಲ್ಲಿ, ರಾಗಿಂಗ್ ನಲ್ಲಿ ತೊಡಗದಂತೆ ಅಥವಾ ಪ್ರೋತ್ಸಾಹಿಸದಂತೆ ಮುಚ್ಚಳಿಕೆ ಪಡೆದುಕೊಳ್ಳುವಾಗ, ಪ್ರತಿಯೊಬ್ಬ ವಿದ್ಯಾರ್ಥಿಗೆ ನೀಡಲಾಗುವ ಮಾಹಿತಿ ಕೈಪಿಡಿಯಲ್ಲಿ ಪರಿಹಾರದ ನಿಯಂತ್ರಣ ಮತ್ತು ವಿಧಾನಗಳ ನೀಲಿ ನಕ್ಷೆಯನ್ನು ಸೇರಿಸಿರಬೇಕು.
- ಪ್ರತಿಯೊಂದು ಹಾಸ್ಟೆಲ್, ಅದೇ ಹಾಸ್ಟೆಲ್ ನಲ್ಲಿ ವಾಸಿಸುವ ಅಥವಾ ಹಾಸ್ಟೆಲ್ ನ ಹತ್ತಿರದಲ್ಲೇ ವಾಸಿಸುವ ಓರ್ವ ಪೂರ್ಣ ಸಮಯದ ವಾರ್ಡನ್ ಅನ್ನು ಹೊಂದಿವೆ ಎಂಬುದನ್ನು ಶೈಕ್ಷಣಿಕ ಸಂಸ್ಥೆಗಳು ಖಚಿತ ಪಡಿಸಿಕೊಳ್ಳಬೇಕು.

2. ಯುಜಿಸಿ, ಎಂಸಿಐ, ಎಐಸಿಟಿಇ ಮತ್ತು ಇತರ ನಿಯಂತ್ರಕ ಮಂಡಳಿಗಳ ಸಲಹೆಯ ಮೇರೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು, ಡಾ|| ರಾಜ್ ಕಚ್ರೂ ಸೂಚಿಸಿದ ಪ್ರಕಾರ ಒಂದು ಕೇಂದ್ರ ಬಿಕ್ಕಟ್ಟು ದೂರವಾಣಿ ಸಂಖ್ಯೆ ಮತ್ತು ರಾಗಿಂಗ್ ವಿರೋಧಿ ಡಾಟಾಬೇಸ್ ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ.
    - ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸಲು ಮತ್ತು ನಿಯಂತ್ರಕ ಮಂಡಳಿಗಳಿಗೆ ಮತ್ತು ರಾಘವನ್ ಸಮಿತಿಗೆ ಅನುಗುಣವಾಗಿ ನಡೆಯದವರ ಕುರಿತ ಮಾಹಿತಿಯನ್ನು ಒದಗಿಸಲು, ಡಾಟಾಬೇಸ್ ನ ಮೇಲ್ವಿಚಾರಣೆ ನಡೆಸುವ ಹೊಣೆಯನ್ನು, ಭಾರತ ಸರ್ಕಾರವು ತಕ್ಷಣವೇ ನೇಮಿಸುವ ಒಂದು ಸರ್ಕಾರೇತರ ಸಂಸ್ಥೆಗೆ ನೀಡಬೇಕು ಎಂದು ಕೂಡ ಗೌರವಾನ್ವಿತ ನ್ಯಾಯಾಲಯವು ತಿಳಿಸಿದೆ.
    - ಡಾಟಾಬೇಸ್ ಅನ್ನು ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಆತನ/ಆಕೆಯ ಪೋಷಕರು/ಪಾಲಕರ ಸಮ್ಮತಿಯೊಂದಿಗಿನ ಅಫಿಡೆವಿಟ್ ಗಳಿಂದ ಸೃಷ್ಟಿಸಲಾಗುವುದು. ಈ ಅಫಿಡೆವಿಟ್ ಗಳನ್ನು ವಿದ್ಯುನ್ಮಾನವಾಗಿ ಶೇಖರಿಸಲಾಗುವುದು ಹಾಗೂ ಪ್ರತಿಯೊಬ್ಬ ವಿದ್ಯಾರ್ಥಿಯ ವಿವರಗಳನ್ನು ಒಳಗೊಂಡಿರುವುದು.
    - ಈ ಡಾಟಾಬೇಸ್ ಸ್ವೀಕೃತ ರಾಗಿಂಗ್ ದೂರುಗಳು ಮತ್ತು ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳ ಸ್ಥಿತಿಗತಿಗಳ ದಾಖಲೆಯಾಗಿ ಕೂಡ ಕಾರ್ಯನಿರ್ವಹಿಸುವುದು.

3. ಯುಜಿಜಿ ರೂಪಿಸಿದ ರಾಗಿಂಗ್ ನ ಹಾವಳಿಯನ್ನು ತಡೆಗಟ್ಟುವ ನಿಬಂಧನೆಗಳನ್ನು, ಎಐಸಿಟಿಈ, ಎಂಸಿಐ, ಡಿಸಿಐ, ಎನ್ಸಿಐ ಮುಂತಾದ ಇತರ ಎಲ್ಲಾ ನಿಯಂತ್ರಕ ಮಂಡಳಿಗಳೆಲ್ಲವೂ ಅಳವಡಿಸಿಕೊಳ್ಳಬೇಕೆಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಅದೇಶಿಸಿದೆ.

4. ಅಮನ್ ಕಚ್ರೂನ ಸಾವನ್ನು ಒಳಗೊಂಡ ಘಟನೆಯು, ಮಾರ್ಗದರ್ಶಿಸೂಚನೆಗಳು ಮತ್ತು ನಿಯಮಗಳ ರಚನೆಯು ಪ್ರಬಲವಾಗಿಲ್ಲ ಎಂಬುದನ್ನು ಎತ್ತಿತೋರಿಸುತ್ತವೆ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಹೀಗಾಗಿ, ಗೌರವಾನ್ವಿತ ನ್ಯಾಯಾಲಯವು, ಇಂತಹ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಮತ್ತು ರಾಗಿಂಗ್ ಅನ್ನು ತಡೆಯಲು ಮತ್ತು ರಾಗಿಂಗ್ ಮಾಡುವವರನ್ನು ಶಿಕ್ಷಿಸುವಲ್ಲಿ ಸಕಾಲಿಕ ಕ್ರಮಗಳನ್ನು ಕೈಗೊಳ್ಳದ ಸಂಸ್ಥೆಯ ಮುಖ್ಯಸ್ಥರು/ಆಡಳಿತ ಮಂಡಳಿಗೆ ದಂಡನೆಗಳನ್ನು

ನೀಡಬೇಕೆಂದು ಆದೇಶಿಸಿದೆ. ದಂಡನೆಗಳ ಜೊತೆಗೆ, ರಾಗಿಂಗ್ ಕುರಿತ ದೂರಿನ ಕುರಿತು ಸಂವೇದನಾರಹಿತ ಅಥವಾ ಉದಾಸೀನ ಮನೋಭಾವ ತೋರುವ ಇಂತಹ ಸಂಸ್ಥೆಯ ಮುಖ್ಯಸ್ಥರು / ಆಡಳಿತ ಮಂಡಳಿಯ ಸದಸ್ಯರು / ಅಧ್ಯಾಪಕ ವರ್ಗದವರು / ಶಿಕ್ಷಕೇತರ ಸಿಬ್ಬಂದಿಗಳ ವಿರುದ್ಧ ವಿಭಾಗೀಯ ತನಿಖೆಯನ್ನು ಪ್ರಾರಂಭಿಸಬೇಕು.

5. ರಾಗಿಂಗಿನ ದುಷ್ಪರಿಣಾಮಗಳು ಮತ್ತು ಅವುಗಳ ತಡೆಗಟ್ಟುವಿಕೆಗಳ ಬಗ್ಗೆ ಕೇವಲ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ, ಅಧ್ಯಾಪಕವರ್ಗದವರನ್ನು ಕೂಡ ಸಂವೇದೀಕರಿಸಬೇಕೆಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ತಿಳಿಸಿದೆ. ಆಡಳಿತ ಸಿಬ್ಬಂದಿ, ತಾತ್ಕಾಲಿಕ ನೌಕರರು, ಭದ್ರತಾ ಸಿಬ್ಬಂದಿ ಮುಂತಾದ ಶಿಕ್ಷಕೇತರ ಸಿಬ್ಬಂದಿಯನ್ನು ಕೂಡ ನಿಯಮಿತವಾಗಿ ರಾಗಿಂಗ್ ನ ಅನಿಷ್ಟ ಮತ್ತು ದುಷ್ಪರಿಣಾಮಗಳ ಕುರಿತು ಸಂವೇದೀಕರಿಸಬೇಕು.
6. ಪ್ರಾಂಶುಪಾಲರು ಅಥವಾ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ, ಕಾಲೇಜಿನಲ್ಲಿ ಕ್ಯಾಂಟೀನ್ ನಡೆಸಲು ಅಥವಾ ಕಾವಲು ಸಿಬ್ಬಂದಿ ಅಥವಾ ಕಟ್ಟಡ/ತೋಟಗಳ ನಿರ್ವಹಣೆಗಾಗಿ ನೇಮಿಸಲಾದ ಗುತ್ತಿಗೆ ಕಾರ್ಮಿಕರನ್ನು ಒಳಗೊಂಡು ಸಂಸ್ಥೆಯ ಪ್ರತಿಯೊಬ್ಬ ನೌಕರರಿಂದ ತಮ್ಮ ಗಮನಕ್ಕೆ ಬರುವ ರಾಗಿಂಗ್ ನ ಯಾವುದೇ ಘಟನೆಯನ್ನು ವರದಿ ಮಾಡುವುದಾಗಿ ಮುಚ್ಚಳಿಕೆಯನ್ನು ಪಡೆಯಬೇಕು ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ಆದೇಶಿಸಿದೆ. ರಾಗಿಂಗ್ ಅನ್ನು ವರದಿ ಮಾಡುವ ಸಿಬ್ಬಂದಿವರ್ಗದವರಿಗೆ ಪ್ರಶಂಸಾ ಪತ್ರಗಳನ್ನು ನೀಡಲು ಸೇವಾ ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗುವುದು. ಇದು ಅವರ ಸೇವೆಯ ದಾಖಲೆಯ ಒಂದು ಭಾಗವಾಗುವುದು.

7. ರಾಗಿಂಗ್ ನ ಯಾವುದೇ ಘಟನೆಗಳನ್ನು ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರುವ ಜವಾಬ್ದಾರಿಯನ್ನು ಹೊಸ ವಿದ್ಯಾರ್ಥಿಗಳ ಪೋಷಕರು/ಪಾಲಕರು ವಹಿಸಿಕೊಳ್ಳುವುದು ಅಗತ್ಯ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ತಿಳಿಸಿದೆ.

8. ಯಾವ ಎಸ್ ಹೆಚ್ಓ/ಎಸ್ಪಿಯ ಅಧಿಕಾರದ ಪರಿಧಿಯಲ್ಲಿ ಒಂದು ನಿರ್ದಿಷ್ಟ ಕಾಲೇಜು ಇರುವುದೋ, ಆ ಕಾಲೇಜಿನ ಕ್ಯಾಂಪಸ್ ನಲ್ಲಿ ರಾಗಿಂಗ್ ನಡೆಯುವುದಿಲ್ಲವೆಂದು ಖಾತರಿಪಡಿಸಿಕೊಳ್ಳುವ ಮತ್ತು ರಾಗಿಂಗ್ ನಂತಹ ಘಟನೆಗಳು ನಡೆದಾಗ ಅವನ್ನು ಪರಿಣಾಮಕಾರಿಯಾಗಿ ವ್ಯವಹರಿಸುವ ಜವಾಬ್ದಾರಿಯು ಆ ಎಸ್ ಹೆಚ್ಓ/ಎಸ್ಪಿಯದಾಗಿರುತ್ತದೆ ಎಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ತಿಳಿಸಿದೆ. ಒಮ್ಮೆ ಒಂದು ಕೇಂದ್ರ ಡಾಟಾಬೇಸ್ / ಬಿಕ್ಕಟ್ಟು ದೂರವಾಣಿ ಸಂಖ್ಯೆ ಕಾರ್ಯಗತಗೊಂಡ ನಂತರ, ಓರ್ವ ಎಸ್ಹೆಚ್ ಓ/ಎಸ್ಪಿಯ ಅಧಿಕಾರದ ಪರಿಧಿಯಲ್ಲಿ ಬರುವ ಒಂದು ನಿರ್ದಿಷ್ಟ ಕಾಲೇಜಿನ ಕುರಿತು ಬಿಕ್ಕಟ್ಟು ದೂರವಾಣಿ ಸಂಖ್ಯೆಯ ಸಿಬ್ಬಂದಿಯು ಆ ಎಸ್ಹೆಚ್ ಓ/ಎಸ್ಪಿಯನ್ನು ಸಂಪರ್ಕಿಸಿದಾಗ ಅವರು ಆ ಘಟನೆಯನ್ನು ಪರಿಣಾಮಕಾರಿಯಾಗಿ ಪರಿಶೀಲಿಸುವರು ಮತ್ತು ಬಿಕ್ಕಟ್ಟು ದೂರವಾಣಿ ಸಂಖ್ಯೆಯ ಸಿಬ್ಬಂದಿ ಮತ್ತು/ಅಥವಾ ಸ್ವತಂತ್ರ ಮೇಲ್ವಿಚಾರಣಾ

ಸಂಸ್ಥೆಯೊಂದಿಗೆ ಸಹಕರಿಸಿ, ಸಂವಹಿಸುವರು. ಇದು ವಿಶ್ವಾಸವನ್ನು ಬೆಳೆಸಿ, ಯಾವುದೇ ಭಯ ಅಥವಾ ವಿಳಂಬವಿಲ್ಲದೆ ರಾಗಿಂಗ್ ನ ಘಟನೆಗಳನ್ನು ವರದಿ ಮಾಡಲು ಜನರನ್ನು ಪ್ರೋತ್ಸಾಹಿಸುವುದು.

9. ಡಾಟಾಬೇಸ್ /ಬಿಕ್ಕಟ್ಟು ನಿವಾರಣಾ ಸಂಖ್ಯೆಯು ಕಾರ್ಯಗತವಾದ ನಂತರ, ರಾಜ್ಯ ಸರ್ಕಾರಗಳು ತಮ್ಮ ರಾಗಿಂಗ್ ವಿರೋಧಿ ಕಾನೂನುಗಳಿಗೆ ಸಂಸ್ಥೆಯ ಮುಖ್ಯಸ್ಥರ ಮೇಲೆ ದಂಡನೆಗಳನ್ನು ಸೂಚಿಸುತ್ತಾ ತಿದ್ದುಪಡಿಗಳನ್ನು ಮಾಡಬೇಕೆಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ತಿಳಿಸಿದೆ.